ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014-15 : ದಿನಾಂಕ: 13-11-2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಣೆ:<br>ಪುಸ್ತಕ ಪ್ರದರ್ಶನ ಹಾಗೂ ಜಾಥಾ ಕಾರ್ಯಕ್ರಮ | 14-11-2014<br>ಶುಕ್ರವಾರ<br>ಬೆಳಗ್ಗೆ<br>8-30 ಗಂಟೆಗೆ | ಉಪ ನಿರ್ದೇಶಕರ ಕಚೇರಿ,<br>ನಗರ ಕೇಂದ್ರ ಗ್ರಂಥಾಲಯ,<br>ಪೂರ್ವ ವಲಯ, ಆರ್.ಟಿ. ನಗರ<br>ಬೆಂಗಳೂರು |
| 2 | ಮಾಜಿ ಪ್ರಧಾನ ಮಂತ್ರಿ ದಿವಂಗತ ಜವಾಹರ್ ಲಾಲ್ ನೆಹರುರವರ 125 ನೇ ಜನ್ಮ ದಿನೋತ್ಸವ ಅಂಗವಾಗಿ ಮಾಲಾರ್ಪಣೆ ಕಾರ್ಯಕ್ರಮ:<br><br>ಮಾಲಾರ್ಪಣೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ. | 14-11-2014<br>ಶುಕ್ರವಾರ<br>ಬೆಳಗ್ಗೆ<br>10-00 ಗಂಟೆಗೆ | ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ. |
| 3 | ಮಕ್ಕಳ ದಿನಾಚರಣೆ – 2014:<br><br>ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ:<br><br>ಶ್ರೀ ವಜುಭಾಯಿ ವಾಲಾ,<br>ರಾಜ್ಯಪಾಲರು, ಕರ್ನಾಟಕ<br><br>ಪ್ರಶಸ್ತಿ ಪ್ರದಾನ: | 14-11-2014<br>ಶುಕ್ರವಾರ<br>ಬೆಳಗ್ಗೆ<br>11-00 ಗಂಟೆಗೆ | ರವೀಂದ್ರ ಕಲಾಕ್ಷೇತ್ರ<br>ಜೆ.ಸಿ. ರಸ್ತೆ,<br>ಬೆಂಗಳೂರು. |

| | | | |
|---|---|---|---|
| | ಶ್ರೀಮತಿ ಉಮಾಶ್ರೀ,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕನ್ನಡ ಮತ್ತು ಸಂಸ್ಕೃತಿ ಸಚಿವರು<br><br>ಶ್ರೀ ಕಿಮ್ಮನೆ ರತ್ನಾಕರ್,<br>ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು. | | |
| 4 | ಕನ್ನಡ ಪುಸ್ತಕ ಪ್ರಾಧಿಕಾರ<br>**ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಹಾಗೂ ಉಚಿತ ಪುಸ್ತಕ ವಿತರಣಾ ಸಮಾರಂಭ:-**<br>**ಕೃತಿಗಳ ಬಿಡುಗಡೆ ಹಾಗೂ ಪ್ರೋತ್ಸಾಹ ಧನ ವಿತರಣೆ:**<br>ಶ್ರೀಮತಿ ಉಮಾಶ್ರೀ,<br>ಕನ್ನಡ ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.<br>ಉಚಿತ ಪುಸ್ತಕಗಳ ವಿತರಣೆ:<br>ಡಾ. ಶಾಲಿನಿ ರಜನೀಶ್,<br>ಪ್ರಧಾನ ಕಾರ್ಯದರ್ಶಿಗಳು,<br>ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ<br>ಅಧ್ಯಕ್ಷತೆ.<br>ಡಾ: ಬಂಜಗೆರೆ ಜಯಪ್ರಕಾಶ,<br>ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ | 14-11-2014<br>ಶುಕ್ರವಾರ<br>ಬೆಳಗ್ಗೆ<br>11-00 ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ,<br>ಜೆ.ಸಿ. ರಸ್ತೆ, ಬೆಂಗಳೂರು |
| 5 | **National Council of Science Museum and Underwriters Laboratories inc**<br>**VALEDICTION AND PRIZE DISTRIBUTION OF NATIONAL SAFETY SCIENCE QUIZ:** | 14-11-2014<br>**Friday**<br>**11-30 AM.** | **Visvesvaraya Industrial & Technological Museum, Bengaluru** |

| | | | |
|---|---|---|---|
| | **Chief Guest:**<br><br>**Sri Sudhakar Rao,**<br>**Former Chief Secretary,**<br>**Govt. of Karnataka.** | | |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

## ಮಕ್ಕಳು ನೆಮ್ಮದಿ, ಸಂತೋಷದ ಸಮಾಜದಲ್ಲಿ ಬೆಳೆದಾಗ ಮಾತ್ರ ಉತ್ತಮ ನಾಗರಿಕರಾಗಲೂ ಸಾಧ್ಯ – ಸಿದ್ದರಾಮಯ್ಯ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಇಂದಿನ ಮಕ್ಕಳು ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಬೇಕಾದಲ್ಲಿ ಅವರ ಬಾಲ್ಯ, ನೆಮ್ಮದಿ ಹಾಗೂ ಸಂತೋಷಗಳ ನಡುವೆ ಕಳೆಯಬೇಕು. ಅದಕ್ಕಾಗಿ ಪೋಷಕರು, ಶಿಕ್ಷಕರು ಹಾಗೂ ಸಮಾಜ, ಮಕ್ಕಳಲ್ಲಿ ಯಾವುದೇ ತಾರತಮ್ಯ ಭಾವನೆಗಳು ಬಾರದಂತೆ ಸಾಮಾಜಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ಸಮಾನತೆಗಳ ವಾತಾವರಣವನ್ನು ಸೃಷ್ಟಿ ಮಾಡಬೇಕು ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಇಂದು ನಡೆದ ರಾಜ್ಯ ಮಟ್ಟದ ಮಕ್ಕಳ ಹಕ್ಕುಗಳ ಸಂಸತ್ ಹಾಗೂ ಮಕ್ಕಳೊಂದಿಗಿನ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳ ಭಾಗವಹಿಸುವ ಹಕ್ಕಿಗೆ ಪೂರಕವಾಗಿ ಮಕ್ಕಳ ದಿನಾಚರಣೆಯ ಒಂದು ದಿನ ಮುಂಚೆಯೇ ನಡೆಸಲಾಗುತ್ತಿರುವ ಮಕ್ಕಳ ಸಂಸತ್ ಕಾರ್ಯಕ್ರಮವು ಮಕ್ಕಳ ಸಮಸ್ಯೆ, ಅಭಿಪ್ರಾಯ, ಅಹವಾಲುಗಳಿಗೆ ರಾಜ್ಯ ಮಟ್ಟದಲ್ಲಿ ವೇದಿಕೆ ನೀಡಿದಂತಾಗಿದೆ ಎಂದು ಅವರು ತಿಳಿಸಿದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಬಂದಂತಹ ಮಕ್ಕಳೊಂದಿಗೆ ಸಂವಾದ ನಡೆಸಿದ ಮುಖ್ಯಮಂತ್ರಿಗಳು ಸುಮಾರು 15 ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದರು. ಹೆಚ್.ಐ.ವಿ. / ಏಡ್ಸ್, ಅಂಗವೈಕಲ್ಯತೆ, ಲೈಂಗಿಕ ದೌರ್ಜನ್ಯ ಮಾದಕ ವಸ್ತುಗಳು, ಬಾಲ ಕಾರ್ಮಿಕ ಪದ್ಧತಿ, ಮೂಡನಂಬಿಕೆ, ಕಡ್ಡಾಯ ಶಿಕ್ಷಣ ಕಾಯ್ದೆ, ಕ್ರೀಡೆ, ಸೇರಿದಂತೆ ಹಲವಾರು ಮಕ್ಕಳ ರಕ್ಷಣಾ ವಿಷಯಗಳ ಬಗ್ಗೆ ಮಕ್ಕಳು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ನೂತನ್‌ಕುಮಾರ್ ಎಂಬ ಅಂಧ ವಿದ್ಯಾರ್ಥಿಯ ಕೋರಿಕೆಯಂತೆ ಅಂಗವಿಕಲ ಮಕ್ಕಳ ಶಾಲೆಗಳಿಗೂ ಸರ್ಕಾರದ ಯಶಸ್ವಿ ಕಾರ್ಯಕ್ರಮವಾದ ಕ್ಷೀರಭಾಗ್ಯ ಯೋಜನೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು. ಅಂಗವಿಕಲ ವಸತಿ ನಿಲಯಗಳಲ್ಲಿ ನೀಡಲಾಗುವ ಭತ್ಯೆಯನ್ನು ಹೆಚ್ಚಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದು ಎಂದು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಶ್ರೀಮತಿ ಉಮಾಶ್ರೀ ಅವರು ಇದೇ ಸಂದರ್ಭದಲ್ಲಿ ಉತ್ತರಿಸುತ್ತಾ ತಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ವಿಕಲಚೇತನರ ಕಲ್ಯಾಣಕ್ಕಾಗಿ ವಿವಿಧ ವಿದ್ಯಾರ್ಥಿ ವೇತನ, ಓದುಗರ ಭತ್ಯೆ, ಸಂಚಾರ ಭತ್ಯೆ ಹಾಗೂ ಉನ್ನತ ಶಿಕ್ಷಣ ಶುಲ್ಕ ಮರುಪಾವತಿ ಸೇರಿದಂತೆ 1000 ಅಂಧ ವಿದ್ಯಾರ್ಥಿಗಳಿಗಾಗಿ ಟಾಕಿಂಗ್ ಲ್ಯಾಪ್‌ಟಾಪ್ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದರು. ವಿಕಲಚೇತನ ಮಕ್ಕಳ ಪೋಷಕರಿಗೆ ವಿಮೆ ಯೋಜನೆ ಕೂಡ ಜಾರಿಯಲ್ಲಿದೆ.

ಯಾದಗಿರಿ ಜಿಲ್ಲೆಯ ಮಹಿಪಾಲ ರೆಡ್ಡಿ ಎಂಬ ವಿದ್ಯಾರ್ಥಿ ಮಕ್ಕಳ ಹಕ್ಕುಗಳ ಒಡಂಬಡಿಕೆ ಆಧಾರದ ಮೇಲೆ 18 ವರ್ಷಕ್ಕಿಂತ ಕಡಿಮೆ ಇರುವ ಎಲ್ಲರೂ ಮಕ್ಕಳೇ ಎಂದು ವಿಶ್ವಸಂಸ್ಥೆ ತೀರ್ಮಾನ ಕೈಗೊಂಡಿರುವ ಹಿನ್ನೆಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ಹಾಗೂ ಕಡ್ಡಾಯ ಶಿಕ್ಷಣ ಯೋಜನೆ ವ್ಯಾಪ್ತಿಯನ್ನು 14 ವರ್ಷದಿಂದ 18 ವರ್ಷದವರೆಗೆ ವಿಸ್ತರಿಸಲು ಕೋರಿದ್ದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಸದರಿ ವಯೋಮಿತಿಯನ್ನು ಬದಲಾವಣೆ ಮಾಡಲು ಸಂವಿಧಾನಕ್ಕೆ ತಿದ್ದುಪಡಿ ತರುವ ಅಗತ್ಯವಿದೆ. ಅದಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ, ಕಾನೂನು ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ, ಪ್ರಾಥಮಿಕ ಶಿಕ್ಷಣ ಸಚಿವರಾದ ಶ್ರೀ ಕಿಮ್ಮನೆ ರತ್ನಾಕರ್, ಆರೋಗ್ಯ ಸಚಿವ ಶ್ರೀ ಯು.ಟಿ. ಖಾದರ್, ಶ್ರೀ ಬಸವರಾಜ ಹೊರಟ್ಟಿ, ನೆ.ಲ. ನರೇಂದ್ರ ಬಾಬು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಹಾಗೂ ಯೂನಿಸೆಫ್ ಪ್ರಾಂತೀಯ ಮುಖ್ಯಸ್ಥರು ಶ್ರೀಮತಿ ರೂತ್ ಲಿಯಾನೊ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಪಹೊ:ಜಿಪಿಆರ್.ಕೆಎಂ.**

# ಲೋಕಾಯುಕ್ತರ ಪ್ರವಾಸ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಜ್ಯದ ಲೋಕಾಯುಕ್ತ ನ್ಯಾಯಮೂರ್ತಿ ಡಾ. ವೈ. ಭಾಸ್ಕರ್ ರಾವ್ ಅವರು ನವೆಂಬರ್ 21 ರಿಂದ 23 ರವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು.

ನವೆಂಬರ್ 20 ರಂದು ಸಂಜೆ 6.50 ಕ್ಕೆ ಬೆಂಗಳೂರಿನಿಂದ ವಿಮಾನದ ಮೂಲಕ ಮಂಗಳೂರಿಗೆ ತೆರಳುವರು. ನವೆಂಬರ್ 21 ರಂದು ಬೆಳಿಗ್ಗೆ 10.30 ಗಂಟೆಗೆ ಅಧಿಕಾರಿಗಳ ಸಭೆ ನಡೆಸುವರಲ್ಲದೆ, ಸಾರ್ವಜನಿಕ ಕುಂದುಕೊರತೆಗಳ ದೂರುಗಳನ್ನು ಸ್ವೀಕರಿಸುವರು.

ನವೆಂಬರ್ 22 ರಂದು ಬೆಳಿಗ್ಗೆ 10.30 ಗಂಟೆಗೆ ಉಡುಪಿ ಜಿಲ್ಲೆಯ ಅಧಿಕಾರಿಗಳ ಸಭೆ ನಡೆಸುವರಲ್ಲದೆ, ಸಾರ್ವಜನಿಕ ಕುಂದುಕೊರತೆಗಳ ದೂರುಗಳನ್ನು ಸ್ವೀಕರಿಸುವರು. ನವೆಂಬರ್ 23 ರಂದು ಸಂಜೆ ಬೆಂಗಳೂರಿಗೆ ಹಿಂದಿರುಗುವರು ಎಂದು ಕರ್ನಾಟಕ ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

# ಸ್ಥಿರಾಸ್ಥಿಗಳ ನೋಂದಣಿ ಮಾರ್ಗಸೂಚಿ, ಮಾರುಕಟ್ಟೆ. ದರ ಪರಿಷ್ಕರಣೆ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಎಲ್ಲಾ ಉಪ ನೋಂದಣಿ ಕಚೇರಿಗಳ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ನೋಂದಣಿಗಾಗಿ ಮಾರ್ಗಸೂಚಿ, ಮಾರುಕಟ್ಟೆ ಮೌಲ್ಯದ ದರಗಳ ಪಟ್ಟಿಯನ್ನು 2014-15 ನೇ ಸಾಲಿಗೆ ಪರಿಷ್ಕರಿಸಲಾಗಿದೆ.

ಪ್ರಕಟಿತ ಪರಿಷ್ಕೃತ ದರಗಳು ನವೆಂಬರ್ 13 ರಿಂದಲೇ ಜಾರಿಗೆ ಬಂದಿದೆ ಹಾಗೂ ಮುದ್ರಿತ ಪ್ರತಿಗಳು ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಇಲ್ಲಿ ದೊರೆಯುತ್ತದೆ ಎಂದು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಿಳಿಸಿದ್ದಾರೆ.

ಸಮ:ಬಾಬು:ಜಿಪಿಆರ್.

# ನಿರುದ್ಯೋಗಿ ಮಹಿಳೆಯರಿಗೆ ತರಬೇತಿ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳಾ ತರಬೇತಿ ಯೋಜನೆಯಡಿ 2014-15ನೇ ಸಾಲಿಗೆ ಕಿಯೋನಿಕ್ಸ್ ತರಬೇತಿ ಸಂಸ್ಥೆಗಳ ಮೂಲಕ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ನಿರುದ್ಯೋಗಿ ಮಹಿಳೆಯರಿಗೆ ಕಂಪ್ಯೂಟರ್ ತರಬೇತಿ 1) Accounting & Computer 2) DTP with Kannada Software 3) Web designing ನಲ್ಲಿ 3 ತಿಂಗಳ ಉಚಿತ ತರಬೇತಿಯನ್ನು ನೀಡಲಾಗುವುದು.

ಮಹಿಳಾ ಅಭ್ಯರ್ಥಿಗಳು ಕಿಯೋನಿಕ್ಸ್ ಸಂಸ್ಥೆಯಲ್ಲಿ ಅರ್ಜಿಯನ್ನು ಪಡೆದು ದಿನಾಂಕ: 25-11-20145 ರ ಒಳಗೆ ಕಿಯೋನಿಕ್ಸ್ ಸಂಸ್ಥೆಗೆ ಸಲ್ಲಿಸಬೇಕು.

ಅರ್ಜಿಗಳು ದೊರೆಯುವ ಮತ್ತು ಸಲ್ಲಿಸುವ ಸ್ಥಳ: ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಡೆವಲಪಮೆಂಟ್ ಕಾರ್ಪೋರೇಷನ್ ಲಿಮಿಟೆಡ್, ಕಿಯೋನಿಕ್ಸ್, 29/1, ನೆಲಮಹಡಿ, ರೇಸ್ ಕೋರ್ಸ್ ರಸ್ತೆ,. ಬೆಂಗಳೂರು, ದೂರವಾಣಿ 080-22206649.

ಸಮ:ಬಾಬು:ಜಿಪಿಆರ್.

# ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ಉತ್ತಮ ಹಾಗೂ ಆದರ್ಶವಾದ ಸೇವೆ ಸಲ್ಲಿಸುತ್ತಿರುವ ಸಂಘ-ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ಮತ್ತು ಕ್ರೀಡೆ, ಕಲೆ, ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರಿಗೆ ' 2014-15 ನೇ ಸಾಲಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೂ ಸಾಹಸ ಪ್ರದರ್ಶಿಸಿ ಹೋರಾಡಿದ ಮಹಿಳೆಗೆ ವೀರ ಮಹಿಳೆ ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಗೆ ವೇತನ ಪಡೆಯುತ್ತಿರುವ ವ್ಯಕ್ತಿಗಳು ಅರ್ಹರಾಗಿರುವುದಿಲ್ಲ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 20-11-2014. ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಕಿದ್ವಾಯಿ ಆಸ್ಪತ್ರೆ ಪಕ್ಕ, ಡಾ. ಎಂ.ಹೆಚ್. ಮರೀಗೌಡ ರಸ್ತೆ (ಹೊಸೂರು ಮುಖ್ಯ ರಸ್ತೆ) , ದೂರವಾಣಿ ಸಂಖ್ಯೆ 26578688 ಸಂಪರ್ಕಿಸಬಹುದು. (ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಫಲಾನುಭವಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ).

ಸಮ:ಬಾಬು:ಜಿಪಿಆರ್

# ಸಚಿವರ ಪ್ರವಾಸ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಜ್ಯ ಪೌರಾಡಳಿತ ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವ

ಶ್ರೀ ಖಮರುಲ್ಲ್ ಇಸ್ಲಾಂ ಅವರು ನವೆಂಬರ್ 17 ರವರೆಗೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

ವಾರ್ತಾ ವಿಶೇಷ:

# ಸವಿ ನೆನಪುಗಳು ಬೇಕು...

ಜನರು ತಮ್ಮ ಜೀವನದ ಸವಿ ನೆನಪುಗಳನ್ನು ಮಧುರ ಸ್ಮೃತಿಯಲ್ಲಿಟ್ಟುಕೊಳ್ಳಲು ತಮ್ಮ ಬದುಕಿನ ಹಲವು ಘಟ್ಟಗಳ (ಮದುವೆ, ನಾಮಕರಣ ಇತ್ಯಾದಿ) ಛಾಯಾಚಿತ್ರಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು ಲೋಕಾರೂಢಿಯಾಗಿದೆ. ಅಂತಹ ಮಧುರ ಸ್ಮೃತಿಗಳು ಹಲವೊಮ್ಮೆ ದಾಖಲೆಗಳಾಗಿ ಅವು ಸ್ಮೃತಿಪಟದಲ್ಲಿ ಹಾದುಹೋಗಿ ಸಂತಸದ ಕ್ಷಣಗಳಗೂ ಕಾರಣವಾಗುತ್ತದೆ.

ಹೌದು ಈ ನಿಟ್ಟಿನಲ್ಲಿ ರಾಜ್ಯ ವಾರ್ತಾ ಇಲಾಖೆಯಲ್ಲಿಯೂ ಅಂತಹ ಐತಿಹಾಸಿಕ, ಅವಿಸ್ಮರಣೀಯ ಕ್ಷಣಗಳ ಸಾಕ್ಷಿಯಾಗಿರುವ ಚಿತ್ರಗಳ ಬೃಹತ್ ಸಂಗ್ರಹವೇ ಇದೆ. ರಾಜ್ಯವನ್ನಾಳಿದ ಹಲವು ಮುಖ್ಯಮಂತ್ರಿಗಳು, ಬೆಂಗಳೂರು ವಿಧಾನ ಸೌಧದ ನಿರ್ಮಾಣದ ಐತಿಹಾಸಿಕ ಛಾಯಾಚಿತ್ರಗಳನ್ನು ತನ್ನ ಹಳೆಯ ಛಾಯಾಚಿತ್ರ ಸಂಗ್ರಹಾಲಯದಿಂದ ಹೊರತೆಗೆದು ರಾಜ್ಯದ ಹಲವೆಡೆ ಪ್ರದರ್ಶಿಸಿದ್ದೂ ಅಲ್ಲದೆ ಸಾರ್ವಜನಿಕರ ನೆನಪು ಕೆದಕುವ ಮೂಲಕ ಜನರಿಗೆ ಮುದ,ಸಂತಸ ನೀಡಿದ್ದು ಇದೆ.

ಇಂತಹ ಅವಿಸ್ಮರಣೀಯ ಚಿತ್ರ ಸಂಪುಟ ವಾರ್ತಾ ಇಲಾಖೆಯ ಪ್ರವೇಶದ್ವಾರದ ಗೋಡೆಗಳಲ್ಲಿ ಅರಳಿ ನಿಂತಿದೆ.

ಡಾ: ಕೆ.ವಿ. ಪುಟ್ಟಪ್ಪ, ಡಾ: ಕೋಟಾ ಶಿವರಾಮಕಾರಂತ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಮುಂತಾದ ಹಿರಿಯ ಸಾಹಿತಿಗಳ ಹಳೆಯ ಸ್ಮರಣೀಯ ಚಿತ್ರಗಳು ಇಲ್ಲಿ ನಿಂತಿದೆ. ಭಾರತದ ಮೊದಲ ರಾಷ್ಟ್ರಪತಿ ಡಾ: ಬಾಬು ರಾಜೇಂದ್ರ ಪ್ರಸಾದ್, ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್, ಹಿರಿಯ ಮುತ್ಸದ್ದಿ ಸಿ.ವಿ. ರಾಜಗೋಪಾಲಾಚಾರಿ, ದೇಶದ ಹಿರಿಯ ವಿಜ್ಞಾನಿಗಳಾದ ಭಾರತರತ್ನ ಸಿ.ವಿ. ರಾಮನ್, ಡಾ: ಸಿ.ಎನ್.ಆರ್. ರಾವ್ ಅವರುಗಳು ಪಾಲ್ಗೊಂಡ ಸಮಾರಂಭದ ಛಾಯಾಚಿತ್ರಗಳು ನೋಡುಗರನ್ನು ಸೆಳೆಯುತ್ತವೆ.

ಭಾರತ ರತ್ನ ಪಡೆದು ಬೆಂಗಳೂರಿಗೆ ಬಂದ ದಿವಾನ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು ತೆರೆದ ಜೀಪಿನಲ್ಲಿ ಮೆರವಣಿಗೆ ಮಾಡಿದ ಛಾಯಾಚಿತ್ರ, ಕನ್ನಡದ ಮೇರುನಟ ಡಾ: ರಾಜ್‌ಕುಮಾರ್, ಡಾ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ: ದೇ ಜವರೇಗೌಡ, ಚಂದ್ರಶೇಖರ ಕಂಬಾರ, ಡಾ: ಗಿರೀಶ್ ಕಾರ್ನಾಡ್, ಹಿಂದೂಸ್ತಾನಿ ಸಂಗೀತ ದಿಗ್ಗಜ ಭೀಮಸೇನ್‌ಜೋಷಿ, ಕರ್ನಾಟಕ ರತ್ನ ಪುರಸ್ಕಾರ ಪಡೆದ ಸಿದ್ಧಗಂಗೆಯ ಶ್ರೀಗಳು, ಧರ್ಮಸ್ಥಳದ ಧರ್ಮಾಧಿಕಾರಿ ಡಾ: ವೀರೇಂದ್ರ ಹೆಗ್ಗಡೆ ಅವರುಗಳು ಸಮಾರಂಭಗಳಲ್ಲಿ ಪಾಲ್ಗೊಂಡ ಅವಿಸ್ಮರಣೀಯ ಚಿತ್ರಗಳೂ ಇಲ್ಲಿವೆ.

ಇತ್ತೀಚೆಗೆ ತೀರ್ಥಹಳ್ಳಿ ತಾಲ್ಲೂಕು ಕುಪಳ್ಳಿಯಲ್ಲಿ ರಾಜ್ಯ ವಾರ್ತಾ ಇಲಾಖೆ ಸಂಘಟಿಸಿದ ಮಹಾತ್ಮಾಗಾಂಧೀಜಿ ಕುರಿತ ಚಿತ್ರಕಲಾ ಕಮ್ಮಟದಲ್ಲಿ ರಚಿಸಿದ ಮಹಾತ್ಮಾಗಾಂಧಿಜೀಯವರ ಬೃಹತ್ ವರ್ಣಚಿತ್ರ ಗಮನಸೆಳೆಯುತ್ತಿದೆ.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಳೆ ಸಂಗ್ರಹಾಗಾರದಲ್ಲಿ ಇಂತಹ ಸಾವಿರಾರು ಚಿತ್ರಗಳು ಇವೆ. ಈ ನಿಟ್ಟಿನಲ್ಲಿ ಇವುಗಳನ್ನು ಬೆಳಕಿಗೆ ತಂದು ಸಾರ್ವಜನಿಕರಿಗೆ ಮಧುರ ಸ್ಮೃತಿಯನ್ನು ಉಂಟುಮಾಡುವ ಯತ್ನ ಇಲಾಖೆಯ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್ ಹಾಗೂ ಹಿರಿಯ ಅಧಿಕಾರಿಗಳದ್ದಾಗಿದೆ.

ಹತ್ತು ಹಲವು ವಾಕ್ಯಗಳಲ್ಲಿ ಹೇಳಬೇಕಾದ್ದನ್ನು ಒಂದು ಛಾಯಾಚಿತ್ರ ಹೇಳುತ್ತದೆ. ಈ ಚಿತ್ರಗಳ ಪರಿಯೂ ಅದೇ. ಈ ಚಿತ್ರಗಳನ್ನು ನೋಡಿದಾಗ ಹಿಂದಿನ ಕಾಲಘಟ್ಟಕ್ಕೆ ಜಾರಿ ಹತ್ತು ಹಲವು ಐತಿಹಾಸಿಕ ನೆನಪುಗಳು ನಿಮ್ಮನ್ನು ಖಂಡಿತಾ ಬಾಧಿಸದೇ ಇರದು.

ಸಮ/ಬಾಬು/ಕೆಎಂ

(ಇದಕ್ಕೆ ಸಂಬಂಧಿಸಿದ ಛಾಯಾಚಿತ್ರ ಲಗತ್ತಿಸಿದೆ)

## ಶಿಕ್ಷಣ ಪಡೆದ ಹೆಣ್ಣುಮಗುವಿನಿಂದ ಸ್ವಾಭಿಮಾನ, ಸ್ವಾವಲಂಬನೆಯ ಬದುಕು ನಡೆಸಲು ಸಾಧ್ಯ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

ಪ್ರತಿ ಹೆಣ್ಣು ಮಗು ಶಿಕ್ಷಣ ಪಡೆದರೆ ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಾಭಿಮಾನದ ಸ್ವಾವಲಂಬನೆಯ ಬದುಕು ನಡೆಸಲು ಸಾಧ್ಯ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಅವರು ಇಂದು ನಗರದ ಶಿಕ್ಷಕರ ಸದನದಲ್ಲಿ ಏರ್ಪಡಿಸಲಾಗಿದ್ದ ಮಹಿಳೆ ಮತ್ತು ಸಮಾಜ ಎಂಬ ವಿಷಯದ ಕುರಿತ ಒಂದು ದಿನದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಸಂವಿಧಾನದಲ್ಲಿ ಪುರುಷರು ಮಹಿಳೆಯರು ಸಮಾನರು ಎಂದು ಒಪ್ಪಿಕೊಂಡಿದ್ದರೂ ಸ್ವಾತಂತ್ರ್ಯಪೂರ್ವದಲ್ಲಿದ್ದ ಸಾಮಾಜಿಕ ವ್ಯವಸ್ಥೆಯ ಪರಿಣಾಮವಾಗಿ ಪುರುಷರು ಹಾಗೂ ಮಹಿಳೆಯರ ಮದ್ಯೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ  ಕಂದಕ ಏರ್ಪಟ್ಟಿದೆ ಈ ಅಸಮಾನತೆ ನಿವಾರಣೆಗೆ ಪ್ರಯತ್ನಗಳು ನಡೆಯುತ್ತಲೇ ಇವೆ.  ಮಹಿಳಾ ಸಾಕ್ಷರತೆ ಈ ಅಸಮಾನತೆ ನಿವಾರಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದು ಮುಖ್ಯಮಂತ್ರಿಯವರು ಪ್ರತಿಪಾದಿಸಿದರು.

ಹೆಣ್ಣುಮಕ್ಕಳು ದೈಹಿಕವಾಗಿ ದುರ್ಬಲರು ಎಂಬ ಮಾತಿದೆ.  ಆದರೆ ಅವರು ದುರ್ಬಲರಲ್ಲ. ಮಾನಸಿಕವಾಗಿ ಪುರುಷರಿಗಿಂತಲೂ ಗಟ್ಟಿಯಾಗಿರುತ್ತಾರೆ.  ಮಕ್ಕಳ ಪಾಲನೆ ಮಾಡುವ ಶಕ್ತಿ ತಾಯಿಗಷ್ಟೇ ಇದೆ ಎಂದು ಅವರು ನುಡಿದರು.

ವಿಚಾರ ಸಂಕಿರಣದಲ್ಲಿ ನೀಡಲಾಗುವ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅನುಷ್ಠಾನಕ್ಕೆ ಚಿಂತನೆ ನಡೆಸುವುದು ಎಂದು ಈ ಸಂದರ್ಭದಲ್ಲಿ ಅವರು ಭರವಸೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ  ಮಹಿಳಾ  ಮತ್ತು ಮಕ್ಕಳ ಅಭಿವೃದ್ಧಿ  ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ಮಾತನಾಡಿ ಸಕಾರಾತ್ಮಕ ಚಿಂತನೆಯಿಂದ ಮಹಿಳೆ ಕುಟುಂಬದಂತೆ ಸಮಾಜವನ್ನು ಕಟ್ಟಬಲ್ಲಳು.  ತನ್ನ ಕ್ಷೇತ್ರದಲ್ಲಿಯೂ ಅತ್ಯುತ್ತಮ ಕೊಡುಗೆ ನೀಡಬಲ್ಲಳು.  ಆದರೆ ಧಾರ್ಮಿಕತೆ ಸಂಪ್ರದಾಯದ ಹೆಸರಿನಲ್ಲಿ ಹೆಣ್ಣುಮಕ್ಕಳನ್ನು ಕಟ್ಟಿಹಾಕುವ ಕೆಲಸ ನಡೆಯುತ್ತಿದೆ.  ಮಹಿಳೆಯ ಅಗತ್ಯಗಳನ್ನು ಬೆಂಬಲಿಸುವ ಬದಲು ಸ್ಥೈರ್ಯ ಕುಗ್ಗಿಸುವ ವಾತಾವರಣವಿದೆ.  ಇದನ್ನೆಲ್ಲಾ ಎದುರಿಸಿಯು ಮಹಿಳೆ ಉನ್ನತ ಸಾಧನೆ ಮಾಡಿದ್ದಾಳೆಂದರೆ ಅದು ಅವಳ ಅಂತ: ಸ್ಥೈರ್ಯದಿಂದ ಮಾತ್ರ ಎಂದು ಅವರು ನುಡಿದರು.  ಮಹಿಳೆ ಮತ್ತು ಮಕ್ಕಳ ದೌರ್ಜನ್ಯ ಕುರಿತು ಪ್ರಬಲ ಕಾನೂನುಗಳನ್ನು ಜಾರಿಗೆ ತಂದಿದೆ. ಅತ್ಯಾಚಾರಿಗಳನ್ನು ಗೂಂಡಾ ಕಾಯ್ದೆಯಡಿ ಶಿಕ್ಷಿಸಲು ಕಾನೂನಿಗೆ ತಿದ್ದುಪಡಿ ಮಾಡಲಾಗಿದೆ.  ಇದೇ ರೀತಿ ಮಹಿಳೆಯರ ರಕ್ಷಣೆಗೆ ಕಾನೂನು ನೆರವು, ಕಾನೂನು ತಿದ್ದುಪಡಿಗಳ ಕುರಿತು ಚರ್ಚೆಯಾಗಬೇಕಿದೆ ಎಂದು ನುಡಿದರು.  ಮಹಿಳಾ ಆಯೋಗದ ಅಧ್ಯಕ್ಷೆ ಶ್ರೀಮತಿ ಮಂಜುಳ ಮಾನಸ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.  ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನಾ ಸಚಿವ ಶ್ರೀ ಟಿ.ಬಿ. ಜಯಚಂದ್ರ, ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಮೋಟಮ್ಮ,  ಹಿರಿಯ ಸಾಹಿತಿ ಶ್ರೀ ಮರುಳ ಸಿದ್ದಪ್ಪ, ಶ್ರೀಮತಿ ಬಿ.ಟಿ. ಲಲಿತಾನಾಯಕ್, ಮಹಿಳಾಪರ ಚಿಂತಕರಾದ ಡಾ: ಮಲ್ಲಿಕಾಘಂಟಿ, ಶಶಿಕಲಾ ವಸ್ತ್ರದ, ಮೀನಾಕ್ಷಿ ಬಾಳಿ, ಸುನಂದಾ ಜಯರಾಂ, ನೀಲಾ ಅವರುಗಳು ಉಪಸ್ಥಿತರಿದ್ದರು.

ಸಮ/ಕೆಎಂ

# ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

**ಬೆಂಗಳೂರು ಆರ್.ಟಿ. ನಗರದಲ್ಲಿರುವ ಪೂರ್ವ ವಲಯ ನಗರ ಕೇಂದ್ರ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ನವೆಂಬರ್ 14 ರಿಂದ 20 ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸಪ್ತಾಹದ ಸಂದರ್ಭದಲ್ಲಿ ಗ್ರಂಥಾಲಯದೆಡೆಗೆ ಓದುಗರ ನಡಿಗೆ, ಮನೆ ಮನೆ ಸಾಹಿತ್ಯ ಸ್ವಚ್ಛತಾ ಆಂದೋಲನ ಹಾಗೂ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.**

ಸಮ/ಬಾಬು/ಕೆಎಂ

# ಸಹಕಾರ ರತ್ನ ಪ್ರಶಸ್ತಿ ಪ್ರಕಟ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ನವೆಂಬರ್ 14 ರಿಂದ ರಾಜ್ಯದಲ್ಲಿ ಹಮ್ಮಿಕೊಳ್ಳಲಾಗಿರುವ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ರತ್ನ ಪ್ರಶಸ್ತಿಗೆ ಈ ಕೆಳಕಂಡ ಗಣ್ಯರನ್ನು ಆಯ್ಕೆ ಮಾಡಲಾಗಿದೆ.

| | | | |
|---|---|---|---|
| **1.** | ಬೆಳಗಾವಿ ವಿಭಾಗ | ಶ್ರೀ ಡಿ.ಆರ್. ಪಾಟೀಲ್ | ಗದಗ ಜಿಲ್ಲೆ. |
| **2.** | **ಬೆಂಗಳೂರು ವಿಭಾಗ** | **ಶ್ರೀ ಎನ್.ಆರ್. ಜಗದೀಶ್** | **ತುಮಕೂರು ಜಿಲ್ಲೆ** |
| **3.** | **ಬೆಂಗಳೂರು ನಗರ** | **ಶ್ರೀ ಡಿ. ಹನುಮಂತಯ್ಯ** | **ಬೆಂಗಳೂರು ನಗರ.** |
| **4.** | **ಗುಲ್ಬರ್ಗಾ ವಿಭಾಗ** | **ಶ್ರೀ ಜಯಂತರಾವ್ ಪತಂಗೆ** | **ರಾಯಚೂರು ಜಿಲ್ಲೆ.** |
| **5.** | **ಮೈಸೂರು ವಿಭಾಗ** | **ಡಾ॥ ಪಿ.ವಿ. ರತ್ನ ಅರಸ್** | **ಮೈಸೂರು ಜಿಲ್ಲೆ.** |
| **6.** | **ನಿವೃತ್ತ ಸಹಕಾರ ಇಲಾಖಾಧಿಕಾರಿ** | **ಶ್ರೀ ಎನ್.ಆರ್. ರಂಗಯ್ಯ** | **ಬೆಂಗಳೂರು.** |

ಬೆಂಗಳೂರಿನಲ್ಲಿ ನವೆಂಬರ್ 15 ರಂದು ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆಂದು ಕರ್ನಾಟಕ ರಾಜ್ಯ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ನಿಯಮಿತದ ವ್ಯವಸ್ಥಾಪನ ನಿರ್ದೇಶಕ ಶ್ರೀ ಕೆ.ಎ. ವೆಂಕಟೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವೆಂಬರ್ 14 ರಿಂದ  ರಾಜ್ಯಾದ್ಯಂತ ಸಹಕಾರ ಸಪ್ತಾಹ ಕಾರ್ಯಕ್ರಮ

**ಬೆಂಗಳೂರು, 13 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಲ ನಿಯಮಿತವು ನವೆಂಬರ್ 14 ರಿಂದ 20 ರವರೆಗೆ 61 ನೇ ಅಖಿಲ ಭಾರತ  ಸಹಕಾರ ಸಪ್ತಾಹದ ಅಂಗವಾಗಿ  ರಾಜ್ಯದ ವಿವಿದೆಡೆಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.  ನವೆಂಬರ್ 14 ರಂದು ಕುಶಾಲ ನಗರದಲ್ಲಿ ಸಹಕಾರಿ ಮಾರಾಟ ಗ್ರಾಹಕ ಚಟುವಟಿಕೆ ರೂಪಾಂತರ ಮತ್ತು ಮೌಲ್ಯ ವರ್ಧನೆ ದಿನ, ನವೆಂಬರ್ 15 ರಂದು ಬೆಂಗಳೂರಿನಲ್ಲಿ ವೃತ್ತಿ ಕೌಶಲ್ಯ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ, ಯುವಜನತೆ ಮತ್ತು ಅಬಲ ವರ್ಗಗಳ ದಿನ, ನವೆಂಬರ್ 16 ರಂದು ಬೆಂಗಳೂರಿನಲ್ಲಿ "ಬ್ರಾಂಡ್ ಬಿಲ್ಡಿಂಗ್" ಮೂಲಕ  ಸಹಕಾರಿ ಅನನ್ಯತೆ ದಿನ, ನವೆಂಬರ 17 ರಂದು ಹಾವೇರಿಯಲ್ಲಿ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ದಿನ, ನವೆಂಬರ್ 18 ರಂದು ಹೊಸಪೇಟೆಯಲ್ಲಿ ಸಹಕಾರಿ ಸಂಸ್ಥೆಗಳು ಮತ್ತುಮ ಪೋಷಕ ವಿಧೇಯತೆ ದಿನ, ನವೆಂಬರ್ 19 ರಂದು ಹುಬ್ಬಳ್ಳಿಯಲ್ಲಿ ಉತ್ತಮ ಜೀವನಕ್ಕೆ ಸಹಕಾರ ಸಂಸ್ಥೆಗಳು ದಿನ ಹಾಗೂ ನವೆಂಬರ್ 20 ರಂದು ಬೆಳಗಾವಿಯಲ್ಲಿ ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳ ಬಲಪಡಿಸುವಿಕೆ ಮತ್ತು ಭಾಗವಹಿಸುವಿಕೆ ದಿನ ಎಂದು ಈ ಸಪ್ತಾಹವನ್ನು ವಿವಿಧ ಧ್ಯೇಯಯೋದ್ದೇಶಗಳೊಂದಿಗೆ ಆಚರಿಸಲಾಗುತ್ತಿದೆ ಎಂದು ಸಹಕಾರ ಮಹಾಮಂಡಲದ ಪ್ರಕಟಣೆ ತಿಳಿಸಿದೆ.
ಸಮ/ಕೆಎಂ

## ನವೆಂಬರ್ 22, 23 ರಂದು ಮಂಗಳೂರಿನಲ್ಲಿ ಆಯುಷ್ ವೈದ್ಯರ ಸಮಾವೇಶ

ಬೆಂಗಳೂರು, ನ. 13 (ಕರ್ನಾಟಕ ವಾರ್ತೆ)-

**ಮಂಗಳೂರಿನ ನೆಹರೂ ಮೈದಾನದಲ್ಲಿ ನವೆಂಬರ್ 22 ಹಾಗೂ 23 ರಂದು ರಾಜ್ಯಮಟ್ಟದ ಆಯುಷ್ ವೈದ್ಯರ ಸಮ್ಮೇಳನವನ್ನು ಏರ್ಪಡಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು.ಟಿ. ಖಾದರ್ ಅವರು ತಿಳಿಸಿದರು.**

**ವಿಕಾಸ ಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಮಾವೇಶದಲ್ಲಿ ಸಉಮಾರು 10 ಸಾವಿರ ಆಯುಷ್ ವೈದ್ಯರು ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಈ ಕಾರ್ಯಕ್ರಮದಲ್ಲಿ ಆಯುಷ್ ಎಕ್ಸ್‌ಪೊ ವಸ್ತುಪ್ರದರ್ಶನ ಆಯೋಜಿಸಲಾಗಿದೆ. ಅಂದಾಜು ನೂರು ಆಯುಷ್ ಔಷಧಿ ತಯಾರಿಕಾ ಸಂಸ್ಥೆಗಳು ಭಾಗವಹಿಸಲಿವೆ ಎಂದರು.**

**ಈ ಸಮಾವೇಶದಲ್ಲಿ ಆಯುಷ್ ವೈದ್ಯರ ಜ್ಞಾನ ವೃದ್ಧಿ ಗೊಳಸಲು ಹೆಸರಾಂತ ವೈದ್ಯರಾದ ಡಾ. ದೇವಿ ಶೆಟ್ಟಿ, ಡಾ. ಬಿ.ಎಂ. ಹೆಗ್ಡೆ, ಮಾನಸಿಕ ರೋಗ ತಜ್ಞ ಡಾ. ಅಶೋಕ್ ಪೈ ಸೇರಿದಂತೆ ನುರಿತ ತಜ್ಞ ವೈದ್ಯರು ಉಪನ್ಯಾಸ ನೀಡಲಿದ್ದಾರೆ ಎಂದು ನುಡಿದರು.**

**ಕಾರ್ಯಕ್ರಮದ ಉದ್ಘಾಟನೆಗೆ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗಿದೆ ಎಂದ ಅವರು ಕಾರ್ಯಕ್ರಮದಲ್ಲಿ ಅರಣ್ಯ ಸಚಿವ ಶ್ರೀ ಬಿ. ರಮಾನಾಥ ರೈ , ಉನ್ನತ ಶಿಕ್ಷಣ ಸಚಿವ ಶ್ರೀ ಆರ್. ವಿ.**

ದೇಶಪಾಂಡೆ, ಯುವಜನ ಸಬಲೀಕರಣ ಸಚಿವ ಶ್ರೀ ಕೆ. ಅಭಯಚಂದ್ರ, ನಗರಾಭಿವೃದ್ಧಿ ಸಚಿವ ಶ್ರೀ ವಿನಯ ಕುಮಾರ್ ಸೊರಕೆ ಹಾಗೂ ಸ್ಥಳೀಯ ಜನ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯದಲ್ಲಿ ಶೇ. 70 ರಷ್ಟು ಪ್ರಾಥಮಿಕ ಆರೋಗ್ಯ ಸೇವೆಯು ಆಯುಷ್ ವೈದ್ಯರಿಂದ ರೋಗಿಗಳಿಗೆ ದೊರಕುತ್ತಿದೆ. ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಜೀವನ ಶೈಲಿಯ ಬದಲಾವಣೆಯಿಂದ ಬರುವ ಅನಾರೋಗ್ಯಗಳಿಗೆ ಆಯುಷ್ ಪದ್ಧತಿಯಿಂದ ಚಿಕಿತ್ಸೆ ನೀಡಬಹುದಾಗಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 25 ಸಾವಿರ ಆಯುಷ್ ವೈದ್ಯರು ಖಾಸಗಿ ಮತ್ತು ಸರ್ಕಾರದ ಆರೋಗ್ಯ ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಇದೇ ಸಂದರ್ಭದಲ್ಲಿ ಅವರು ತಿಳಿಸಿದರು.

ಏರ್ ಅಂಬ್ಯುಲೆನ್ಸ್:

ರಾಜ್ಯದಲ್ಲಿ ಏರ್ ಅಂಬ್ಯುಲೆನ್ಸ್ ಯೋಜನೆ ಜಾರಿಗೆ ತರಲು ಚಿಂತನೆ ನಡೆಸಲಾಗಿದೆ. ಇದರ ಅನುಷ್ಠಾನಕ್ಕೆ ಲಂಡನ್ ಮೂಲದ ಸಂಸ್ಥೆಯೊಂದು ಮುಂದಕ್ಕೆ ಬಂದಿದೆ. ಈ ಬಗ್ಗೆ ಪ್ರಾಥಮಿಕ ಹಂತದ ಮಾತುಕತೆ ನಡೆಸಲಾಗಿದೆ ಎಂದು ತಿಳಿಸಿದರು. ಎರಡನೇ ಹಂತದ ಸಭೆಯನ್ನು ಮುಂದಿನ ತಿಂಗಳ ಮೊದಲ ವಾರದಲ್ಲಿ ನಡೆಸಲಾಗುವುದು. ಮೊದಲಿಗೆ ಪ್ರಾಯೋಗಿಕವಾಗಿ ಒಂದು ಹೆಲಿಕಾಪ್ಟರನ್ನು ಬಳಸಿಕೊಳ್ಳಲಾಗುವುದು. ಅದು ಯಶಸ್ವಿಯಾದಲ್ಲಿ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.

ತಂಬಾಕು ನಿಷೇಧ:

ಜಗಿಯುವ ತಂಬಾಕು ನಿಷೇಧಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಮುಖ್ಯಮಂತ್ರಿಗಳು ಈ ಬಗ್ಗೆ ತೀರ್ಮಾನ ಕೈಗೊಳ್ಳುವರು ಎಂದು ತಿಳಿಸಿದರು.